

ಹೆಬ್ಬೆಟ್ಟು ಅಗಲದ ಹಮ್ಮಿಂಗ್ ಬರ್ಡ್ ಎಂಬ ಹಕ್ಕಿಯೊಂದು ಅಮೆರಿಕದಲ್ಲಿದೆ. ಒಮ್ಮೆ ಅದರ ರೆಕ್ಕೆ ಬಡಿತ, ಮತ್ತದರ ಹೃದಯದ ಬಡಿತ ವೇಗವನ್ನು ಲೆಕ್ಕ ಮಾಡಹೊರಟರೆ ನಮ್ಮ ತಲೆ ಗಿರ್ ಎನ್ನುತ್ತದೆ. ಒಂದು ಸಣ್ಣ ಪಕ್ಷಿಯಲ್ಲಿರುವ ಇಂತಹ ವಿಸ್ಮಯಗಳನ್ನು ಗಮನಿಸಿದರೆ, ಮನುಷ್ಯ ತನ್ನನ್ನೇ ತಾನು ಶೇಷ್ಠ ಮತ್ತು ಬಲಿಷ್ಠ ಎಂದು ಭಾವಿಸುವುದು ವಿಚಿತ್ರವೆನಿಸುತ್ತದೆ.

